**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ಧನಂಜಯ ಸರ್ಜಿ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಯ ಕುರಿತು**

**ವಿಷಯ:**

ರಾಜ್ಯದ ಪ್ರತಿಷ್ಠಿತ ವಿಶ್ವಾವಿದ್ಯಾಲಯಗಳಲ್ಲಿ ಒಂದಾದ 38 ವರ್ಷ ಇತಿಹಾಸವುಳ್ಳ, 2000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯದಲ್ಲಿ ನಡೆದಿರುವ ಬ್ರಹ್ಮಾಂಡ ಭ್ರಷ್ಟಚಾರ ಮತ್ತು ಅಸಮರ್ಪಕ ಆಡಳಿತದ ಕುರಿತು ಇತ್ತೀಚಿಗೆ ಪ್ರತಿಭಟನೆಗಳು ನಡೆದಿದ್ದು, ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ವಿಶ್ವವಿದ್ಯಾಲಯದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ತೋರಿಸುತ್ತದೆ.

ಕುವೆಂಪು ವಿ.ವಿಯಲ್ಲಿನ ಭ್ರಷ್ಟಾಚಾರ ಹಾಗೂ ದಕ್ಷ ಆಡಳಿತ ನಡೆಸುವಲ್ಲಿ ವಿಫಲವಾಗಿರುವ ಕುಲಸಚಿವರ ವಿರುದ್ಧ, ಇತ್ತೀಚಿಗೆ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿ ಸಮಗ್ರ ತನಿಖೆಗೆ ಆಗ್ರಹಿಸಿವೆ. ದೇಶದ ಮುಂದಿನ ಭವಿಷ್ಯವಾಗಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಬದುಕನ್ನು ರೂಪಿಸುವ ಮಹತ್ತರ ಜವಬ್ದಾರಿ ನಿರ್ವಹಿಸಬೇಕಾದ ವಿಶ್ವವಿದ್ಯಾಲಯ ಏಕರೂಪದ ವೇಳಾಪಟ್ಟಿ ಅನುಸರಿಸುವಲ್ಲಿ ಲೋಪ, ವಿ.ವಿ.ಯ ಪ್ರಸಾರಾಂಗದಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಆಗಿ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿದೆ. ವಿ.ವಿ ಯ ದೂರ ಶಿಕ್ಷಣ ಪ್ರವೇಶಾತಿ ಮತ್ತು ವ್ಯಾಸಂಗದ ಇನ್ನಿತರ ನಿರ್ವಹಣೆಗಳನ್ನು ಎಲ್.ಎಂ.ಎಸ್ ಮುಖಾಂತರ ನಡೆಸಲು ಬೆಂಗಳೂರಿನ Pheme Software Limited ಕಂಪನಿಯೊಂದಿಗೆ ಮಾಡಿಕೊಂಡಿರುವ ಒಪ್ಪಂದ, ದರ ನಿರ್ಣಯಗಳಲ್ಲಿನ ತಪ್ಪುಗಳಿಂದಾಗಿ ವಿ.ವಿ.ಗೆ ಲಕ್ಷಾಂತರ ರೂಪಾಯಿಗಳ ನಷ್ಟವಾಗಿರುವುದಾಗಿ ಪ್ರತಿಭಟನಕಾರರು ದೂರಿರುತ್ತಾರೆ.

ಆಶ್ಚರ್ಯದ ವಿಷಯವೇನೆಂದರೇ ಸದರಿ ಸಂಸ್ಥೆಯವರು ಈ ಹಿಂದೆ ಅಧ್ಯಯನ ಕೇಂದ್ರ ತೆರೆದು ಆ ಮೂಲಕ ವಿದ್ಯಾರ್ಥಿಗಳಿಂದ ಪಡೆಯಲಾಗಿದ್ದ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸದೆ ಕೋಟ್ಯಾಂತರ ಶುಲ್ಕವನ್ನು ಬಾಕಿ ಉಳಿಸಿಕೊಂಡಿದ್ದು, ಸದರಿ ಸಂಸ್ಥೆಯು ವಿಶ್ವಾವಿದ್ಯಾಲಯಕ್ಕೆ ನೀಡಿದ 30 ಲಕ್ಷದ ಚೆಕ್ ಬೌನ್ಸ್ ಆಗಿ ಪ್ರಕರಣ ನ್ಯಾಯಲಯದಲ್ಲಿ ಇದ್ದು ಇಂತಹ ಸಂಸ್ಥೆಯೊಂದಿಗೆ ಮತ್ತೊಮ್ಮೆ ವ್ಯವಹರಿಸಿರುವುದು ಹಲವು ಅನುಮಾನಗಳಗೆ ಎಡೆಮಾಡಿಕೊಟ್ಟಿದೆ.

ಕುವೆಂಪು ವಿಶ್ವಾವಿದ್ಯಾಲಯವು ದೂರಶಿಕ್ಷಣ ವ್ಯಾಸಂಗ ಮಾಡಲು ಪ್ರವೇಶಾತಿಯನ್ನು ಎಲ್.ಎಂ.ಎಸ್ ಮುಖಾಂತರ ನಡೆಸಲು Pheme Software Limited, Bangalore. ಸಂಸ್ಥೆಯೊಂದಿಗೆ ಹಲವು ಆಕ್ಷೇಪಣೆಗಳನ್ನು ಬದಿಗೊತ್ತಿ ಕೆ.ಟಿ.ಟಿ.ಪಿ ಕಾಯ್ದೆಯನ್ನು ಉಲ್ಲಂಘನೆ ಮಾಡಿ ಒಪ್ಪಂದ ಮಾಡಿಕೊಂಡಿರುವುದು ವಿಶ್ವಾವಿದ್ಯಾಲಯಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ಉಂಟುಮಾಡಿದೆ ಮತ್ತು ಇದರಲ್ಲಿ ಭ್ರಷ್ಟಚಾರವಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಈ ಗಂಭೀರ ವಿಷಯವನ್ನು ಸರ್ಕಾರ, ಉನ್ನತ ಮಟ್ಟದ ತನಿಖೆ ನಡೆಸಿ ಭ್ರಷ್ಟಚಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಉನ್ನತ ಶಿಕ್ಷಣ ಸಚಿವರನ್ನು ಶೂನ್ಯವೇಳೆಯಲ್ಲಿ ತಮ್ಮ ಮೂಲಕ ಆಗ್ರಹಿಸುತ್ತೇನೆ.

**ಉತ್ತರ:**

ಕೋವಿಡ್- 19ರ ಸಮಯದಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ವ್ಯತ್ಯಯವಾಗಿದ್ದು, ಕೋವಿಡ್-19ರ ನಂತರದಲ್ಲಿ ಸರ್ಕಾರದಲ್ಲಿ ಪ್ರತಿ ಶೈಕ್ಷಣಿಕ ಸಾಲಿಗೂ ಅನ್ವಯವಾಗುವಂತೆ ಏಕರೂಪ ಶೈಕ್ಷಣಿಕ ವೇಳಾಪಟ್ಟಿಯನ್ನು ಹೊರಡಿಸುತ್ತಿದ್ದು, 2025-26ನೇ ಶೈಕ್ಷಣಿಕ ಸಾಲಿಗೆ ಉನ್ನತ ಶಿಕ್ಷಣ ಇಲಾಖೆಯಡಿ ಬರುವ ವಿಶ್ವವಿದ್ಯಾಲಯಗಳು/ಕಾಲೇಜು ಶಿಕ್ಷಣ / ಅನುದಾನ/ ಅನುದಾನ ರಹಿತ ಕಾಲೇಜುಗಳಲ್ಲಿ (ತಾಂತ್ರಿಕ ಶಿಕ್ಷಣವನ್ನು ಹೊರತುಪಡಿಸಿ) ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ ಏಕರೂಪ ಶೈಕ್ಷಣಿಕ ವೇಳಾಪಟ್ಟಿಯನ್ನು ಹೊರಡಿಸಲಾಗಿದ್ದು, ಅದರನ್ವಯ ಕುವೆಂಪು ವಿಶ್ವವಿದ್ಯಾಲಯವು ಏಕ ರೂಪದ ವೇಳಾಪಟ್ಟಿಯಂತೆ ಶೈಕ್ಷಣಿಕ ಚಟುವಟಿಕೆಗಳನ್ನು ಸರಿದೂಗಿಸಲು ಕ್ರಮವಹಿಸುತ್ತಿದೆ.

ಕುವೆಂಪು ವಿಶ್ವವಿದ್ಯಾಲಯದ ಪ್ರಸಾರಂಗದಲ್ಲಿ ಲಕ್ಷಾಂತರ ಅವ್ಯವಹಾರ ಆಗಿರುವ ಕುರಿತು ವಿಶ್ವವಿದ್ಯಾಲಯಕ್ಕೆ ದೂರುಗಳು ಸ್ವೀಕೃತವಾಗಿದ್ದು, ಕುವೆಂಪು ವಿಶ್ವವಿದ್ಯಾಲಯವು ಸದರಿ ದೂರುಗಳಲ್ಲಿನ ವಿಷಯದ ಕುರಿತು ಸತ್ಯಾಸತ್ಯತೆಯನ್ನು ತಿಳಿದು ನಿಯಮಾನುಸಾರ ಅಗತ್ಯ ಕ್ರಮವಹಿಸಲು ಅನುವಾಗುವಂತೆ ತನಿಖೆ ನಡೆಸಿ ವರದಿ ನೀಡಲು ವಿಶ್ವವಿದ್ಯಾಲಯದಿಂದ ಶ್ರೀ ಅನಂತ್ ಎಸ್. ಸಿಂಡಿಕೇಟ್ ಸದಸ್ಯರು, ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿರುತ್ತದೆ.

ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ವಿಭಾಗಕ್ಕೆ 08 ಅಧ್ಯಯನ ಕೇಂದ್ರಗಳಿಂದ ವಿಶ್ವವಿದ್ಯಾಲಯಕ್ಕೆ ರೂ. 4,11,95,699/- ಗಳ ಶುಲ್ಕ ಪಾವತಿಗೆ ಬಾಕಿಯಿರುತ್ತದೆ. ಸದರಿ ಅಧ್ಯಯನ ಕೇಂದ್ರಗಳಿಂದ ಸ್ವೀಕೃತವಾಗಬೇಕಾದ ಬಾಕಿ ಶುಲ್ಕವನ್ನು ಪಾವತಿಸದಿರುವ ಅಧ್ಯಯನ ಕೇಂದ್ರಗಳ ಮೇಲೆ ವಿಶ್ವವಿದ್ಯಾಲಯವು ಕ್ರಮ ಕೈಗೊಳ್ಳುವ ಸಂಬಂಧ ದಿನಾಂಕ:19.07.2024ರಂದು ನಡೆದ ಸಿಂಡಿಕೇಟ್ ಸಭೆ ನಡೆಸಿ, ಸದರಿ ಸಭೆಯ ನಿರ್ಣಯದನುಸಾರ ಬಾಕಿ ಶುಲ್ಕವನ್ನು ಪಾವತಿಸಬೇಕಾಗಿರುವ ಅಧ್ಯಯನ ಕೇಂದ್ರಗಳಿಗೆ ಕೊನೆಯದಾಗಿ ಒಂದು ಅವಕಾಶವನ್ನು ನೀಡಿ, ತದನಂತರದಲ್ಲಿ ಬಾಕಿ ಶುಲ್ಕವನ್ನು ಪಾವತಿಸದಿರುವ ಅಧ್ಯಯನ ಕೇಂದ್ರಗಳ ವಿರುದ್ಧ ಎಫ್.ಐ.ಆರ್/ಮೊಕದ್ದಮೆ ದಾಖಲಿಸುವುದಾಗಿ ಅಧ್ಯಯನ ಕೇಂದ್ರಗಳಿಗೆ ವಿಶ್ವವಿದ್ಯಾಲಯದಿಂದ ಪತ್ರ ವ್ಯವಹರಿಸಿರುತ್ತದೆ.

ಮುಂದುವರೆದು, ಕುವೆಂಪು ವಿಶ್ವವಿದ್ಯಾಲಯವು ಶುಲ್ಕ ಬಾಕಿ ಇರುವ ವಿಷಯವನ್ನು ದೂರ ಶಿಕ್ಷಣ ನಿರ್ದೇಶನಾಲಯದ ದಿನಾಂಕ:01.02.2025ರ ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ಮಂಡಿಸಿದ್ದು, ಸದರಿ ಸಭೆಯ ನಿರ್ಣಯದಂತೆ ಬಾಕಿ ಶುಲ್ಕ ಪಾವತಿಸದಿರುವ ಕೇಂದ್ರಗಳ ವಿರುದ್ಧ, ವಿಶ್ವವಿದ್ಯಾಲಯದಿಂದ ಎಫ್.ಐ.ಆರ್./ದಾವೆ ಹೂಡಲು ವಿಶ್ವವಿದ್ಯಾಲಯವು ಕ್ರಮವಹಿಸುತ್ತಿದೆ.

ಕುವೆಂಪು ವಿಶ್ವವಿದ್ಯಾಲಯವು NIRF Rank ಪಟ್ಟಿಯಲ್ಲಿ 100ರ ಒಳಗಿದುದ್ದರಿಂದ ಹಾಗೂ ನ್ಯಾಕ್ 'ಎ' ಗ್ರೇಡ್ ಹೊಂದಿದ್ದುದರಿಂದ ಯುಜಿಸಿ ಪತ್ರ ಸಂಖ್ಯೆ: F.No. 1-14/2020(DEB-1), dated: 10.03.2021ರನ್ವಯ ವಿಶ್ವವಿದ್ಯಾಲಯಕ್ಕೆ 12 ಆನ್‌ಲೈನ್ ಪದವಿ ಕೋರ್ಸ್ ಗಳನ್ನು. (ಪ್ರಾಯೋಗಿಕ ಪರೀಕ್ಷ ಕೋರ್ಸ್ ಹೊರತುಪಡಿಸಿ) ನಡೆಸಲು ಅನುಮತಿ ನೀಡಿರುತ್ತದೆ. ಅದರನ್ವಯ ವಿಶ್ವವಿದ್ಯಾಲಯವು 12 ಆನ್‌ಲೈನ್ ಪದವಿ ಕೋರ್ಸ್‌ಗಳನ್ನು 2020ರ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಿರುತ್ತದೆ. University Grants Commission (Open and Distance Learning Programmes and Online Programmes) Regulations, 2020ರ ನಿಯಮ 2(q) ರನ್ವಯ ಇ-ಕಲಿಕಾ ಕಾರ್ಯಕ್ರಮಗಳ ವಿತರಣೆ, ಕಲಿಯುವವರ ತೊಡಗಿಸಿಕೊಳ್ಳುವಿಕೆ, ಮೌಲ್ಯಮಾಪನ, ಫಲಿತಾಂಶಗಳು, ವರದಿ ಮಾಡುವಿಕೆ ಮತ್ತು ಇತರ ಸಂಬಂಧಿತ ವಿವರಗಳನ್ನು ಒಂದೇ ಕೇಂದ್ರೀಕೃತ ಸ್ಥಳದಲ್ಲಿ ಟ್ರ್ಯಾಕ್ ಮಾಡುವ ವ್ಯವಸ್ಥೆಯ ಸಂಬಂಧ LMS (Learning Management System) ಅನ್ನು ಅಳವಡಿಸಿಕೊಳ್ಳಬೇಕಾಗಿರುವುದರಿಂದ, LMS (Learning Management System) Software ಮೂಲಕ ಅನುಷ್ಠಾನಗೊಳಿಸಲು ವಿಶ್ವವಿದ್ಯಾಲಯವು ದಿನಾಂಕ:28.10.2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು KTTP ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ್ನು ಇ-ಟೆಂಡರ್ ಆಹ್ವಾನಿಸಿದ್ದು, ಈ ಪ್ರಕ್ರಿಯೆಯಲ್ಲಿ M/s Pheme Software Pvt., Ltd., Bangalore, ಈ ಸಂಸ್ಥೆ L1 ಆಗಿ ಆಯ್ಕೆಗೊಂಡಿರುತ್ತಾರೆ.

ಅದರನ್ವಯ L1 ಆಗಿ ಆಯ್ಕೆಯಾದ ಸಂಸ್ಥೆಯೊಂದಿಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ನೇಮಿಸಿದ್ದ ಸಮಿತಿಯವರು ದರಸಂಧಾನ ನಡೆಸಿ, ಅಂತಿಮಗೊಳಿಸಿರುವಂತೆ ವಿಶ್ವವಿದ್ಯಾಲಯವು M/s Pheme Software Pvt., Ltd., Bangalore, ಈ ಸಂಸ್ಥೆಯೊಂದಿಗೆ ರೂ. 96,00,000/- (ಶೇ. 18 ಜಿ.ಎಸ್.ಟಿ. ಹೊರತುಪಡಿಸಿ) ಗಳಿಗೆ ನಿಗದಿಪಡಿಸಿ, ಬಿಡ್ ಒಟ್ಟು ಮೊತ್ತವನ್ನು ಮೂರು ಹಂತದಲ್ಲಿ (60+20+20) ರಂತೆ ಪಾವತಿಸಲು ವಿಶ್ವವಿದ್ಯಾಲಯವು ಒಡಂಬಡಿಕೆ ಮಾಡಿಕೊಂಡಿರುತ್ತದೆ. ಅದರನುಸಾರ ವಿಶ್ವವಿದ್ಯಾಲಯವು M/s Pheme Software Pvt. Ltd., Bangalore, ಸಂಸ್ಥೆಯು ಸಲ್ಲಿಸಿರುವ ಬಿಲ್ಲಿನ್ನು ಪರಿಶೀಲಿಸಿ, ಸದರಿ ಸಂಸ್ಥೆಗೆ ಮೊದಲ ಹಂತದ (60- ಶೇ. 18 ಜಿ.ಎಸ್.ಟಿ. ಸಹಿತ) ಮೊತ್ತ ರೂ. 67,96,800/- ಗಳನ್ನು ಪಾವತಿ ಮಾಡಿರುತ್ತದೆ. ಉಳಿದ ಎರಡು ಹಂತಗಳ ಮೊತ್ತವನ್ನು ಪಾವತಿಸಲು ಬಾಕಿ ಉಳಿಸಿಕೊಂಡಿರುತ್ತದೆ.

LMS Software ಅನುಷ್ಠಾನಗೊಂಡ ನಂತರ ಪ್ರಥಮ ಆವೃತ್ತಿಯಲ್ಲಿ 1311 ಹಾಗೂ ದ್ವಿತೀಯ ಆವೃತ್ತಿಯಲ್ಲಿ 165 ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಯುಜಿಸಿ ನಿಯಮದಂತೆ LMS Software ಮೂಲಕ ಮಾಡಿಕೊಳ್ಳಲಾದೆ. ಸದರಿ ವಿದ್ಯಾರ್ಥಿಗಳು ಪ್ರವೇಶಾತಿ ಶುಲ್ಕವನ್ನು ವಿಶ್ವವಿದ್ಯಾಲಯದ ಖಾತೆ ಆನ್‌ಲೈನ್ ಮೂಲಕ ಜಮೆ ಮಾಡಿರುತ್ತಾರೆ. ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಇ-ಕಂಟೆಂಟ್, ಸಂಪರ್ಕ ತರಗತಿ (ಆಡಿಯೋ ವಿಷುವಲ್) ಆಂತರಿಕ ಮೌಲ್ಯಮಾಪನದ ಪ್ರಶ್ನೆ ಪತ್ರಿಕೆ ವಿತರಣೆ ಹಾಗೂ ಆಂತರಿಕ ಮೌಲ್ಯಮಾಪನದ ಉತ್ತರದ ಪತ್ರಿಕೆ ಪಡೆಯುವುದು ಹಾಗೂ ಪರೀಕ್ಷಾ ಸಂಬಂಧಿ ಕಾರ್ಯಗಳನ್ನು LMS ಮೂಲಕವೇ ವಿಶ್ವವಿದ್ಯಾಲಯವು ನೀಡಲು ಕ್ರಮವಹಿಸುತ್ತಿದೆ.

Pheme Software Pvt Ltd, Bangalore ಸಂಸ್ಥೆಯವರು ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ಅಧ್ಯಯನ ಕೇಂದ್ರವನ್ನು ತೆರೆದಿರುವುದಿಲ್ಲವಾದ್ದರಿಂದ, ವಿಶ್ವವಿದ್ಯಾಲಯಕ್ಕೆ ಸಂಸ್ಥೆಯಿಂದ ಯಾವುದೇ ಶುಲ್ಕ ಬಾಕಿಯಿರುವುದಿಲ್ಲ ಮತ್ತು ಯಾವುದೇ ಚೆಕ್ ಬೌನ್ಸ್ ಆಗಿರುವುದಿಲ್ಲ ಹಾಗೂ ಈ ಕುರಿತು ನ್ಯಾಯಾಲಯದಲ್ಲಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲವೆಂದು ವಿಶ್ವವಿದ್ಯಾಲಯವು ತಿಳಿಸಿರುತ್ತದೆ.

**ಸಂಖ್ಯೆ: ಇಡಿ 18 ಯುಎಸ್‌ವಿ 2025**

**(ಡಾ: ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಸಚಿವರು